Providing of X-Ray Plant in Raichur Civil Hospital

374. Sri M. NAGAPPA (Raichur).—

Will the Minister for Health be pleased to state :—

(*a*) whether there is X-Ray Plant in Raichur Civil Hospital, Raichur ;

(*b*) whether the X-Ray Plant purchased by the Government is lying at Bombay since about one year or more, for want of transportation charges ;

(*c*) whether the Minister was informed in the matter when he had been to Raichur a few months ago ;

(*d*) the action taken by Government to provide X-Ray Plant to the Civil Hospital at Raichur ?

Sri Y. RAMAKRISHNA (Minister for Health).—

(*a*) Yes.

(*b*) No.

(*c*) Yes ; he was informed that the X-Ray Machine in Raichur Civil Hospital was not in working condition.

(*d*) Action has been taken to get the old 30 M. A. machine repaired. The new 200 M. A. X-Ray Machine recently purchased will be installed early.

ಶ್ರೀ ಎಂ. ನಾಗಪ್ಪ.—ಉತ್ತರದಲ್ಲಿ 30 ಎಂ. ಎ. ಯಂತ್ರವನ್ನು ರಿಪೇರಿ ಮಾಡಿಸಲು ಕ್ರಮ ಕೈಕೊಳ್ಳಲಾಗಿದೆ ಎಂದು ಹೇಳಿದೆ. ಅದು ಉಪಯೋಗಕ್ಕೆ ಬಾರದೆ ಎಷ್ಟು ವರ್ಷ ಆಗಿದೆ ?

† ವೈ. ರಾಮಕೃಷ್ಣ.—1968 ರಿಂದ.

ಶ್ರೀ ಎಂ. ನಾಗಪ್ಪ.—ಬಹುಶಃ ಮಂತ್ರಿಗಳು 1968 ರಲ್ಲಿ ಅಲ್ಲಿಗೆ ಬಂದಾಗ ಯಂತ್ರ 2 ವರ್ಷ ಗಳಿಂದ ಕೆಲಸ ಮಾಡುತ್ತಿಲ್ಲವೆಂಬುದನ್ನು ಗಮನಕ್ಕೆ ತರಲಾಯಿತು. ಆದರೆ 1968 ರಿಂದ ಕೆಲಸ ಮಾಡುತ್ತಿಲ್ಲವೆಂದು ಹೇಳಿದಿರಿ. ವಾಸ್ತವಿಕವಾಗಿ ಅದು ಆರ್ಡರಿನಲ್ಲಿಲ್ಲವೆಂದು ತಮಗೆ ಯಾವಾಗ ಗೊತ್ತಾಯಿತು ?

ಶ್ರೀ ವೈ. ರಾಮಕೃಷ್ಣ.—ಅದು ಆರ್ಡರಿನಲ್ಲಿಲ್ಲವೆಂಬುದು ನನ್ನ ಗಮನಕ್ಕೆ ಬಂದಿದೆ. ರಿಪೇರಿ ಮಾಡಲು ಮೆಸರ್ಸ್ ಎಕ್ಸ್‌ರೇ ಎರೆಕ್ಟ್ರೋ ಕಂಪೆನಿ, ಬಾಂಬೆಗೆ ಕಳಿಸಲಾಗಿತ್ತು. ಅಲ್ಲಿ ಸ್ಟ್ರೈಕ್ ಆಗಿ ಸಕಾಲದಲ್ಲಿ ಕೆಲಸವಾಗಲಿಲ್ಲ. ಪ್ರತಿವಾರ ರಿಮೈಂಡರ್ ಕೊಡುತ್ತಿದ್ದೇವೆ.

ಶ್ರೀ ಎಂ. ನಾಗಪ್ಪ.—ಹೊಸ 200 ಎಂ. ಎ. ಎಕ್ಸ್-ರೇ ಯಂತ್ರವನ್ನು ಖರೀದಿ ಮಾಡಿರುವ ತಾರೀಖು ಯಾವುದು ? ಈಗ ಅದು ಎಲ್ಲಿದೆ ?

ಶ್ರೀ ವೈ. ರಾಮಕೃಷ್ಣ.—ಮೆಷೀನ್ ಎಲ್ಲಿದೆ ಅಂತ ಗೊತ್ತಿಲ್ಲ ಬೇರೆ ಪ್ರಶ್ನೆ ಕೇಳಿದರೆ ಹೇಳುತ್ತೇನೆ. ಅದನ್ನು ಏಕೆ ಅಲ್ಲಿ ಇಡಲಿಲ್ಲ ಎಂದರೆ ಅದನ್ನು ಇಡಲಿಕ್ಕೆ ತಕ್ಕಂಥ ಕೋಣೆ ಇಲ್ಲ, ಪ್ರತ್ಯೇಕವಾಗಿ ಕಟ್ಟಿಸಿ ಆಮೇಲೆ ಆ ಮೆಷೀನನ್ನು ಅಲ್ಲಿಗೆ ಸಾಗಿಸಬೇಕೆಂದು ತೀರ್ಮಾನ ಕೈಕೊಂಡಿದ್ದಾರೆ. ಪಿ. ಡಬ್ಲ್ಯು. ಡಿ. ಗೆ ಬರೆದಿದ್ದೇವೆ, ಕೋಣೆ ತಯಾರಾದ ಮೇಲೆ ಅದನ್ನು ಅಲ್ಲಿಗೆ ಕಳುಹಿಸಿ ಕೊಡುತ್ತೇವೆ.

ಶ್ರೀ ಕೆ. ನಂಗನ ಗೌಡ.—ಅರ್ಜಿ ಎಂದರೆ ಇನ್ನು ಎಷ್ಟು ದಿವಸ ಬೇಕಾಗಬಹುದು ?

ಶ್ರೀ ವೈ. ರಾಮಕೃಷ್ಣ.—ಆ ರೂಮು ಯಾವಾಗ ಕಟ್ಟುತ್ತಾರೋ ಆ ಕೂಡಲೇ ಕಳುಹಿಸುತ್ತೇವೆ.

ಶ್ರೀ ಕೆ. ನಂಗನ ಗೌಡ.—ಒಂದು ತಿಂಗಳು ಅಥವಾ ಎರಡು ತಿಂಗಳು ಅಂತ ಹೇಳಿ ಒಂದು ಕಾಲಮಿತಿ ಹಾಕಲಿಕ್ಕೆ ಸಾಧ್ಯವಿಲ್ಲವೇ ?

ಶ್ರೀ ವೈ. ರಾಮಕೃಷ್ಣ.—ಆ ಯಂತ್ರ ಇಡಲಿಕ್ಕೆ ಯಾವಾಗ ಕೋಣೆ ತಯಾರಾಗುತ್ತದೆಯೋ ಆ ಕೂಡಲೇ ಕಳುಹಿಸಿಕೊಡುತ್ತೇವೆ. ಮಷಿನು ಕೊಂಡುಕೊಂಡಾಗಿದೆ, ಎಲ್ಲೋ ಒಂದು ಕಡೆ ಇಟ್ಟಿದ್ದಾರೆ, ಪಿ. ಡಬ್ಲ್ಯು. ಡಿ. ಗೆ ಬರೆದಿದ್ದೇವೆ. ಕೋಣೆ ತಯಾರಾದ ಕೂಡಲೇ ಕಳುಹಿಸುತ್ತೇವೆ.

ಶ್ರೀ ಎಂ. ನಾಗಪ್ಪ.—ಬೊಂಬಾಯಿನಲ್ಲಿ ಖರೀದಿ ಮಾಡಿದಂತಹ ಮೇಷಿನ್‌ಗೆ ಟ್ರಾನ್ಸ್ ಪೋರ್ಟೇಷನ್ ಖರ್ಚು ಕೊಡಲಲ್ಲ ಅಂತ ಹೇಳಿ ಅದು ಅಲ್ಲಯೇ ಬೊಂಬಾಯಿ ಸ್ಟೇಷನ್‌ನಲ್ಲಿ ಬಿದ್ದಿದೆ. ಅದಕ್ಕಾಗಿಯೇ ಈ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ನನಗೆ ಗೊತ್ತಿಲ್ಲ, ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ ಎಂದು ಹೇಳುತ್ತೀರಿ. ಇದಕ್ಕೆ ಬೇರೆ ಪ್ರಶ್ನೆ ಹಾಕಬೇಕೇ ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ಈಗ ಅದು ಬೊಂಬಾಯಿನಲ್ಲಿ ಇದೆಯೋ ಅಥವಾ ಮೈಸೂರಿನಲ್ಲಿದೆಯೋ ಆ ವಿಷಯ ನನಗೆ ಗೊತ್ತಿಲ್ಲ, ಅದಕ್ಕೆ ನೋಟೀಸ್ ಬೇಕು ಎಂದು ಹೇಳಿದ್ದೇನೆ, ಅದರಲ್ಲಿ ತಪ್ಪೇನಿದೆ ? I will get that information in the course of the day, if the Member wants.

ಶ್ರೀ ಎನ್. ಜಿ. ಹಾಲಪ್ಪ.—ಹೊಸ ಮೆಷೀನ್‌ಗೆ ಎಷ್ಟು ದುಡ್ಡು ಕೊಟ್ಟು ಕೊಂಡುಕೊಂಡಿರಿ ? ಅದನ್ನು ಇಲ್ಲಿಯವರೆಗೂ ಕಳುಹಿಸದೇ ಇರುವುದು ಅಧಿಕಾರಿಗಳ ಉದಾಸೀನವೇ, ಸರ್ಕಾರದವರ ಉದಾಸೀನವೇ ಎಂಬುದನ್ನು ತಿಳಿಸುತ್ತೀರಾ ?

Sri Y. RAMAKRISHNA.—I have already assured that the information will be supplied to the Member in the course of the day.

ಶ್ರೀ ಎಂ. ನಾಗಪ್ಪ.—ರಾಯಚೂರಿನಲ್ಲಿ ಸಾಧಾರಣ 3-4 ವರ್ಷದಿಂದ ಎಕ್ಸ್‌ರೇ ಮೆಷೀನ್ ಇಲ್ಲದೇ ಹೋಗಿ ಅಲ್ಲಿರತಕ್ಕ ರೋಗಿಗಳಿಗೆ ಸಾಕಾಷ್ಟು ತೊಂದರೆಯಾಗುತ್ತಾ ಇದೆ, ಅದಕ್ಕೆ ಏನಾದರೂ ಮಾಡಿ ಒಂದು ಅಥವಾ ಎರಡು ತಿಂಗಳುಗಳೊಳಗೆ ಎಕ್ಸ್‌ರೇ ಮೆಷೀನ್ ಪ್ರೊವೈಡ್ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—3-4 ವರ್ಷಗಳು ಅನ್ನುವುದು ಸತ್ಯಕ್ಕೆ ದೂರವಾದ ಮಾತು, 1968ರಲ್ಲಿ 5 ಸಾವಿರ ರೂಪಾಯಿ ಚಿಲ್ಲರೆ ಕೊಟ್ಟು ಮೆಷೀನ್ ರಿಪೇರಿಗೆ ಕಳುಹಿಸಿದ್ದೇವೆ, ಅಲ್ಲಿ ಸ್ಟೈಕ್ ನಡೆಯುತ್ತಾ ಇದ್ದರೆ ಏನು ಮಾಡುವುದು ! ಅದಷ್ಟು ಬೇಗ ಮೆಷಿನ್ ಕಳುಹಿಸುವ ಏರ್ಪಾಡು ಮಾಡುತ್ತೇವೆ.

Grant of Loan and aid by Khadi Board to Village Industries Society at Tumminakatti

564. Sri N. L. BELLAD (Ranibennur).—

Will the Minister for Development be pleased to state :—

(*a*) the amount of loan and aid granted by the Khadi Board to the Village Industries Society at Tumminakatte, Ranibennur taluk together with the industries for which they were granted and the years of grant ;

(*b*) whether the loan and aid have been appropriated for the purposes and industries for which they were granted (details may kindly be furnished) ?